ರಾಜಿಯಾಗದೆ ಆರು ದಶಕಗಳ ಅವಧಿಯ ಸಿನಿಯಾನದಲ್ಲಿ ಐವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿರುವುದು ಅವರ ಹೆಚ್ಚುಗಾರಿಕೆ. ಭಾರತದ ಸರ್ವೋತ್ಕೃಷ್ಟ ಸಿನಿಮಾಗಳ ಯಾದಿಯಲ್ಲಿ ವಿಶ್ವನಾಥ್ ನಿರ್ದೇಶಿಸಿದ ಚಿತ್ರಗಳಿಗೆ ಸ್ಥಾನ ಇದ್ದೇ ಇರುತ್ತದೆ. ಮತ್ತೆ ಮತ್ತೆ ನೋಡಬೇಕೆನಿಸುವ ಚಿತ್ರಗಳ ಸಂಖ್ಯೆಯೇ ಡಜನ್ ದಾಟಬಹುದು. ಅವರ ಚಿತ್ರಗಳ ಹಾಡು–ಸಂಗೀತ ಕಿವಿಗೆ ಇಂಪು, ತೆರೆಯ ಮೇಲಿನ ದೃಶ್ಯ ಕಣ್ಣಿಗೆ ತಂಪು.

ವಿಶ್ವನಾಥ್ ಸೃಜನಾತ್ಮಕ ಸಾಮರ್ಥ್ಯದ ಬಗ್ಗೆ ತೆಲುಗು ಪ್ರೇಕ್ಷಕರಿಗೆ ಅಪಾರವಾದ ವಿಶ್ವಾಸ. ಅವರ ನಿರ್ದೇಶನದಲ್ಲಿ ಒಂದು ಚಿತ್ರ ಸೆಟ್ಟೇರಿತೆಂದರೆ ಏನೋ ಒಂದು ಬಗೆಯ ಕುತೂಹಲ, ತವಕ. ಆರು ತಿಂಗಳಿಗೋ ವರ್ಷಕ್ಕೋ ಒಮ್ಮೆ ಸಂಗೀತ ಕಛೇರಿಗೆ ಹೋಗಿ ಪುಳಕಗೊಂಡಂತೆ; ಸೊಗಸಾದ ಒಂದು ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ನೋಡಿ ಸಂಭ್ರಮಿಸಿದಂತೆ ಅವರ ಸಿನಿಮಾಗಳನ್ನು ನೋಡಿ ಪ್ರೇಕ್ಷಕರು ಖುಷಿಪಟ್ಟಿದ್ದಾರೆ.

ಇದಕ್ಕೆ 'ಶಂಕರಾಭರಣಂ' ಚಿತ್ರವೇ ಬಹುದೊಡ್ಡ ನಿದರ್ಶನ. ಅದರಲ್ಲಿನ ಹೀರೊಗೆ ತಾರಾವರ್ಚಸ್ಸು ಉಂಟೇ? ಇಲ್ಲ. ಹೀರೋಯಿನ್ ಏನಾದರೂ ಸುರಸುಂದರಾಂಗಿಯೇ? ಅಲ್ಲವೇ ಅಲ್ಲ. ನಡುವಯಸ್ಸು ದಾಟಿದ ಸಂಗೀತಗಾರ ಹಾಗೂ ಒಬ್ಬ ನೃತ್ಯ ಕಲಾವಿದೆ ನಡುವಣ ಅನುಬಂಧದ ಸುತ್ತ ಹೆಣೆದುಕೊಂಡ ಕಥೆ. ಹಾಡುಗಳು, ಸಂಗೀತ ಕಛೇರಿಯಲ್ಲಿ ಕುಳಿತು ಕೇಳಿದಂತೆ ಇರುತ್ತವೆ. ನೃತ್ಯಗಳಂತೂ ಕಲಾಕ್ಷೇತ್ರವೊಂದರಲ್ಲಿನ ಶಾಸ್ತ್ರೀಯ ನೃತ್ಯ ಪ್ರದರ್ಶನವನ್ನು ನೆನಪಿಸುತ್ತವೆ. ಆದರೂ ಜನ ಮುಗಿಬಿದ್ದು ನೋಡಿದರು. ನೋಡುಗರ ಮನಸ್ಸನ್ನು ಹಿಡಿದಿಡುವಂಥ ಕಥನ ಮತ್ತು ಅದನ್ನು ಅದ್ಭುತ ಎನ್ನುವ ರೀತಿಯಲ್ಲಿ ತೆರೆಗೆ ಅಳವಡಿಸಿದ ರೀತಿಗೆ ಪ್ರೇಕ್ಷಕರು ಮಂತ್ರಮುಗ್ಧರಾದರು. ಭಾಷೆ–ಗಡಿಗಳ ಹಂಗಿಲ್ಲದೆ ಕರ್ನಾಟಕ, ತಮಿಳುನಾಡು, ಕೇರಳದಲ್ಲೂ ಈ ಚಿತ್ರ ನೋಡುಗರ ಮನಸೂರೆಗೊಂಡಿತು. ಗಳಿಕೆಯ ದೃಷ್ಟಿಯಿಂದಲೂ ದೊಡ್ಡ ಯಶಸ್ಸು ದಾಖಲಿಸಿತು. ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಹಲವು ಪ್ರಶಸ್ತಿ–ಪುರಸ್ಕಾರಗಳೂ ಮುಡಿಗೇರಿದವು.

ವಿಶ್ವನಾಥ್ ಅಂದಾಕ್ಷಣ ಇಂಥ ಹತ್ತಾರು ಚಿತ್ರಗಳು ಕಣ್ಣಮುಂದೆ ಹಾದುಹೋಗುತ್ತವೆ. 'ಸಿರಿಸಿರಿ ಮುವ್ವ', 'ಸಾಗರಸಂಗಮಂ', 'ಸ್ವಾತಿಮುತ್ಯಂ', 'ಸಿರಿವೆನ್ನೆಲ', 'ಶ್ರುತಿಲಯಲು', 'ಶುಭಸಂಕಲ್ಪಂ', 'ಸ್ವರ್ಣಕಮಲಂ', 'ಸೂತ್ರಧಾರುಲು', 'ಸಪ್ತಪದಿ', 'ಸ್ವಯಂಕೃಷಿ', 'ಶುಭಲೇಖ', 'ಸ್ವಾತಿಕಿರಣಂ', 'ಓ ಸೀತ ಕಥ'... ಈ ಒಂದೊಂದು ಚಿತ್ರವೂ ಬೇರೆ ಬೇರೆ ಕಾರಣಗಳಿಗಾಗಿ ಪ್ರೇಕ್ಷಕರ ಮನದಲ್ಲಿ ಶಾಶ್ವತ ಸ್ಥಾನ ಪಡೆದಿವೆ. ಒಂದು ತಿರುಳುಗಟ್ಟಿ ಕಥೆಯಲ್ಲಿ ನಮ್ಮ ಸಂಸ್ಕೃತಿ, ಆಚಾರ–ವಿಚಾರಗಳನ್ನು ಹದವಾಗಿ ಮಿಳಿತಗೊಳಿಸುವ ಕಲೆ ವಿಶ್ವನಾಥ್ ಅವರಿಗೇ ಸಿದ್ಧಿಸಿದ ರಸವಿದ್ಯೆ.

ಇವರು ನಿರ್ದೇಶಿಸಿದ ಸಿನಿಮಾ ಎಂದರೆ ಕೆತ್ತಿದ ಶಿಲ್ಪ ಇದ್ದಂತೆ. ಅಚ್ಚ ತೆಲುಗುತನಕ್ಕೆ ಅವರ ಚಿತ್ರಗಳು ಕೇರಾಫ್ ಅಡ್ರೆಸ್. ಶಾಸ್ತ್ರೀಯ ಸಂಗೀತ–ನೃತ್ಯವನ್ನು ಅವರಂತೆ ದುಡಿಸಿಕೊಂಡವರು ವಿರಳ. ಅರ್ಥಪೂರ್ಣ ಸಾಹಿತ್ಯ, ನವಿರುಹಾಸ್ಯ, ನಿಜಬದುಕಿಗೆ ಹತ್ತಿರವಾದಂಥ ಪಾತ್ರಪೋಷಣೆ... ಇವೆಲ್ಲ ಅವರ ಸಿನಿಮಾಗಳ ಸತ್ವಶಾಲಿ ಅಂಶಗಳು. ಶಾಸ್ತ್ರೀಯ ಸಂಗೀತದ ಪ್ರಾಥಮಿಕ ಜ್ಞಾನ ಇಲ್ಲದವರೂ ಅವರ ಚಿತ್ರಗಳಲ್ಲಿನ ಹಾಡುಗಳಿಗೆ ತಾಳ ಹಾಕುವಂತೆ, ತಲೆದೂಗುವಂತೆ ಮಾಡಬಲ್ಲರು.

ಸಿನಿಮಾ ವಿತರಣಾ ಸಂಸ್ಥೆಯೊಂದರ ಕಚೇರಿಯಲ್ಲಿ ವ್ಯವಸ್ಥಾಪಕರಾಗಿ ದುಡಿದ ಸುಬ್ರಹ್ಮಣ್ಯಂ ಅವರ ಮಗ ವಿಶ್ವನಾಥ್. ಪತ್ನಿ ಜಯಲಕ್ಷ್ಮಿ. ಈ ದಂಪತಿಗೆ ಪದ್ಮಾವತಿ, ನಾಗೇಂದ್ರನಾಥ್ ಹಾಗೂ ರವೀಂದ್ರನಾಥ್ ಹೆಸರಿನ ಮೂವರು ಮಕ್ಕಳು. ವಿಶ್ವನಾಥ್ ಅವರಿಗೆ ಈಗ 87ರ ಹರೆಯ. ಆಂಧ್ರಪ್ರದೇಶದ ಗುಡಿವಾಡ ಸಮೀಪದ ರೇಪಲ್ಲೆ ಪ್ರಾಂತ್ಯದವರು. 1948ರಲ್ಲಿ ಮದ್ರಾಸ್‌ನ ವಾಹಿನಿ ಸ್ಟುಡಿಯೊದಲ್ಲಿ ಸೌಂಡ್ ಎಂಜಿನಿಯರಿಂಗ್ ವಿಭಾಗದಲ್ಲಿ ದುಡಿಮೆ ಆರಂಭ. ಧ್ವನಿಮುದ್ರಣಕ್ಕೆ ಸೀಮಿತಗೊಳ್ಳಲು ಅವರಲ್ಲಿನ ಸೃಜನಶೀಲ ಸೆಲೆ ಬಿಡಲಿಲ್ಲ. 'ಮೂಗಮನಸುಲು' ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿ ದುಡಿಯುವ ಮೂಲಕ ಸಿನಿಮಾ ನಿರ್ದೇಶನದ ಕಡೆ ವಾಲಿಕೊಳ್ಳುತ್ತಾರೆ. ಅನ್ನಪೂರ್ಣಾ ಪಿಕ್ಚರ್ಸ್ ಮುಖ್ಯಸ್ಥರಾಗಿದ್ದ ದುಕ್ಕಿಪಾಟಿ ಮಧುಸೂಧನರಾವ್ ಅವರು 'ಆತ್ಮಗೌರವಂ' (1965) ಚಿತ್ರ ನಿರ್ದೇಶಿಸಲು ಅವಕಾಶ ನೀಡುತ್ತಾರೆ. ಈ ಚಿತ್ರದ ನಾಯಕ–ನಾಯಕಿ ಅಕ್ಕಿನೇನಿ ನಾಗೇಶ್ವರ ರಾವ್, ಕಾಂಚನಾ. ಆಂಧ್ರಪ್ರದೇಶ ಸರ್ಕಾರ ನೀಡುವ 'ನಂದಿ' ಪುರಸ್ಕಾರವು ಮೊದಲ ಚಿತ್ರಕ್ಕೇ ಒಲಿಯಿತು. ಎನ್‌ಟಿಆರ್ ನಟಿಸಿದ 'ನಿಂಡು ದಂಪತುಲು', 'ನಿಂಡು ಹೃದಯಾಲು' ಮೊದಲಾದ ಚಿತ್ರಗಳಿಗೂ ಸಾರಥ್ಯ ವಹಿಸಿದ್ದಾರೆ. ಶೋಬನ್‌ಬಾಬು ನಾಯಕನಾಗಿ ನಟಿಸಿದ 'ಜೀವನ ಜ್ಯೋತಿ' (1975) ಚಿತ್ರವೂ 'ನಂದಿ' ಪುರಸ್ಕಾರ ಪಡೆದು ವಿಶ್ವನಾಥ್ ಖ್ಯಾತಿ ಹೆಚ್ಚಿಸಿತು.

ಸೂತ್ರಬದ್ಧ ಸಿನಿಮಾಗಳು ಅಬ್ಬರಿಸಲು ಆರಂಭಿಸಿದ ಕಾಲಘಟ್ಟದಲ್ಲಿ ವಿಶ್ವನಾಥ್ ಕಲಾತ್ಮಕ ಚಿತ್ರಗಳನ್ನು ರೂಪಿಸಿ ಗೆದ್ದದ್ದು ಸಾಹಸಗಾಥೆ. ಕಮಲಹಾಸನ್ ವೃತ್ತಿಬದುಕಿನ ಶ್ರೇಷ್ಠ ಸಿನಿಮಾಗಳ ಯಾದಿಯಲ್ಲಿ ವಿಶ್ವನಾಥ್ ನಿರ್ದೇಶನದಲ್ಲಿ ಒಡಮೂಡಿದ 'ಸ್ವಾತಿಮುತ್ಯಂ', 'ಸಾಗರಸಂಗಮಂ' ಚಿತ್ರಗಳಿಗೆ ಕಾಯಂ ಸ್ಥಾನ ಇದೆ. ಚಿರಂಜೀವಿ ತಾರಾವರ್ಚಸ್ಸು ಉತ್ತುಂಗದಲ್ಲಿದ್ದ ಕಾಲಘಟ್ಟದಲ್ಲಿ ಅವರಿಂದ ಚಮ್ಮಾರನ ಪಾತ್ರ ('ಸ್ವಯಂಕೃಷಿ') ಮಾಡಿಸುವ ಧೈರ್ಯ ತೋರಲು ಕಾಶೀನಾಥುನಿಗಷ್ಟೇ ಸಾಧ್ಯ. ಯಶಸ್ಸಿಗೆ ವಾರ್ಮಮಾರ್ಗಗಳಿಲ್ಲ ಎಂಬ ಸಂದೇಶ ಸಾರುವ ಚಿತ್ರ 'ಸ್ವಯಂಕೃಷಿ'.

ಬಂಗಾಳಿ ನಟ ಬ್ಯಾನರ್ಜಿ ಅವರನ್ನು ಕರೆತಂದು 'ಸಿರಿವೆನ್ನೆಲ' ಸುರಿಸಿದರು. 'ಸ್ವಾತಿಕಿರಣಂ' ಎಂಬ ಸಂಗೀತಪ್ರಧಾನ ಚಿತ್ರದ ನಾಯಕ ಮಲಯಾಳಂ ನಟ ಮಮ್ಮುಟ್ಟಿ. ಹೊಸಬರು, ಹಿರಿಯ–ಕಿರಿಯರು, ವರ್ಚಸ್ವೀ ನಟರು ಎಂಬ ಭೇದವಿಲ್ಲದೆ ಎಲ್ಲರೂ ವಿಶ್ವನಾಥ್ ಚಿತ್ರಗಳಲ್ಲಿ ನಟಿಸಿದ್ದಾರೆ. ಅವರ ಚಿತ್ರಗಳಲ್ಲಿ ಅಭಿನಯಿಸಲು ಅವಕಾಶ ಸಿಕ್ಕರೆ ಅದನ್ನು ಗೌರವ ಅಂತ ಭಾವಿಸಿದವರೇ ಹೆಚ್ಚು.

ವಿಶ್ವನಾಥ್ ಅವರಿಗೆ ಇಂಗ್ಲಿಷ್ ಅಕ್ಷರಮಾಲೆಯ 'ಎಸ್' ಅಕ್ಷರದ ಬಗ್ಗೆ ಮಮತೆ ಹೆಚ್ಚು. ಅವರ ಬಹುಪಾಲು ಚಿತ್ರಗಳ ಹೆಸರು 'ಎಸ್' ಅಕ್ಷರದಿಂದಲೇ ಆರಂಭವಾಗುತ್ತದೆ. ತೆಲುಗಿನಲ್ಲಿ ತಾವು ನಿರ್ದೇಶಿಸಿದ ಹಲವು ಚಿತ್ರಗಳನ್ನು ಹಿಂದಿಯಲ್ಲೂ ಅವರೇ ನಿರ್ದೇಶಿಸಿದ್ದಾರೆ. 'ಈಶ್ವರ್', 'ಸಂಗೀತ್', 'ಸರ್‌ಗಮ್' ಮೊದಲಾದ ಚಿತ್ರಗಳು ಅವರ ಮೂಸೆಯಲ್ಲಿ ಅರಳಿವೆ.

ಶ್ರಮ ಸಂಸ್ಕೃತಿಗೆ ಅಪಾರ ಗೌರವ ನೀಡುವ ವಿಶ್ವನಾಥ್, ಚಿತ್ರ ನಿರ್ದೇಶನದ ವೇಳೆ ಖಾಕಿ ದಿರಿಸು ತೊಡುವುದನ್ನು ರೂಢಿ ಮಾಡಿಕೊಂಡಿರುವುದು ವಿಶೇಷ. ಸೆಟ್ಟೇರಿದ ಕ್ಷಣದಿಂದ ಚಿತ್ರ ಪೂರ್ಣಗೊಳ್ಳುವವರೆಗೂ ಅದೇ ಅವರ ದಿರಿಸು.

ಅಭಿನಯದಲ್ಲೂ ಸಿದ್ಧಹಸ್ತರು ವಿಶ್ವನಾಥ್. ಕಮಲಹಾಸನ್ ಹಾಗೂ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಕೋರಿಕೆಯಂತೆ ಮೊದಲ ಸಲ 'ಶುಭಸಂಕಲ್ಪಂ' ಚಿತ್ರಕ್ಕೆ ಬಣ್ಣ ಹಚ್ಚಿದರು. ಬಳಿಕ 'ಸ್ವರಾಭಿಷೇಕಂ', 'ಪಾಂಡುರಂಗಡು', 'ನರಸಿಂಹನಾಯುಡು', 'ಲಕ್ಷ್ಮೀ ನರಸಿಂಹ', 'ಸಂತೋಷಂ', 'ಅತಡು', ರಜನೀಕಾಂತ್ ಅಭಿನಯದ 'ಲಿಂಗ' ಮೊದಲಾದ ಚಿತ್ರಗಳಲ್ಲಿ ನಟಿಸಿದ್ದಾರೆ. ಅಭಿನಯಕ್ಕೂ ನಂದಿ ಪುರಸ್ಕಾರ ಪಡೆದ ಹೆಗ್ಗಳಿಕೆ ಅವರದು. ತೆಲುಗಿನಲ್ಲಿ ಪೋಷಕ ಪಾತ್ರಗಳಿಗೆ ಎಸ್.ವಿ. ರಂಗರಾವ್ ಜೀವ ತುಂಬುತ್ತಿದ್ದರು. ಅವರು ಬಿಟ್ಟುಹೋದ ಸ್ಥಾನವನ್ನು ವಿಶ್ವನಾಥ್ ಈಗ ತುಂಬತೊಡಗಿದ್ದಾರೆ.

ನಟ–ನಟಿಯರಲ್ಲದೆ ಬೇರೆ ಬೇರೆ ವಿಭಾಗಗಳಲ್ಲಿ ಅನೇಕ ಪ್ರತಿಭೆಗಳನ್ನು ಪರಿಚಯಿಸಿದ ಕೀರ್ತಿ ವಿಶ್ವನಾಥ್ ಅವರಿಗೆ ಸಲ್ಲುತ್ತದೆ. ಗೀತ ರಚನೆಕಾರ ವೇಟೂರಿ ಸುಂದರರಾಮಮೂರ್ತಿ ಅವರನ್ನು 'ಓ ಸೀತ ಕಥ' ಮೂಲಕ ಪರಿಚಯಿಸಿದರು. ಸೀತಾರಾಮಶಾಸ್ತ್ರಿ 'ಸಿರಿವೆನ್ನೆಲ' ಮೂಲಕ ಬೆಳಕಿಗೆ ಬಂದರು. ಚಿತ್ರಗೀತೆ ಪ್ರಕಾರಕ್ಕೆ ಇವರ ಕೊಡುಗೆ ಬಹುದೊಡ್ಡದು.

ವಿಶ್ವನಾಥ್ ನಿರ್ದೇಶನದ ಚಿತ್ರಗಳು ಪ್ರೇಕ್ಷಕರಲ್ಲಿ ಅಭಿರುಚಿ ರೂಪಿಸುವ ಕೆಲಸ ಮಾಡಿವೆ. ಶಾಸ್ತ್ರೀಯ ನೃತ್ಯ ಹಾಗೂ ಸಂಗೀತ ಕಲಿಯಲು ಯುವಕ–ಯುವತಿಯರಿಗೆ ಪ್ರೇರಣೆ ನೀಡಿವೆ. ತೆಲುಗು ಸಿನಿಮಾದ ಘನತೆ ಹೆಚ್ಚಿಸಿವೆ. ವರದಕ್ಷಿಣೆ ಪಿಡುಗು, ಕುಲ–ಮತ ಭೇದದಂಥ ಸಾಮಾಜಿಕ ಸಮಸ್ಯೆಗಳಿಗೆ ಅಬ್ಬರ–ಆವುಟಗಳಿಲ್ಲದೆ ಸೂಕ್ಷ್ಮ ನೆಲೆಯಲ್ಲಿ ಪರಿಹಾರಗಳನ್ನು ಸೂಚಿಸಿವೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯ ಮೌಲ್ಯಗಳಿಗೆ ಕನ್ನಡಿ ಹಿಡಿದಿವೆ.

ಇಂಥ ಮೇರು ಪ್ರತಿಭೆಗೆ ಈಗ 'ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರ' ಒಲಿದಿರುವುದು ಸಿನಿರಸಿಕರಿಗೆ ಸಂತಸದ ಸಂಗತಿ. ಈ ಮೂಲಕ 'ವಿಶ್ವನಾಥ್ ಅವರು ವಿ. ಶಾಂತಾರಾಂ ಅಂಥವರ ಸಾಲಿಗೆ ಸೇರಿರುವುದು ನನಗೆ ಅಪಾರ ಸಂತೋಷ ತಂದಿದೆ' ಎಂದು ನಟ ಮಂಜುಭಾರ್ಗವಿ ನೀಡಿರುವ ಪ್ರತಿಕ್ರಿಯೆ ಅರ್ಥಪೂರ್ಣ. ಅದೇ ಪರಂಪರೆಯ ಕೊಂಡಿ ವಿಶ್ವನಾಥ್.